O.S 180/2013
DW-1

**ಸಾಕ್ಷಿದಾರರನ್ನು ಕರೆಯಿಸಲಾಯಿತು** **ಪ್ರಮಾಣ ವಚನ ಬೋಧಿಸಲಾಯಿತು.**

**ದಿನಾಂಕಃ 11-03-2019.**

*ಮುಂದುವರೆದ ಪಾಟೀ ಸವಾಲು ಶ್ರೀ ಜಿ.ಎನ್.ಆರ್ ವಕೀಲರಿಂದ*

ಮಾಸ್ತಿಗೌಡರವರು ನಮ್ಮ ಮಾವ.ಮಾಸ್ತಿಗೌಡರಿಗೆ 5 ಜನ ಮಕ್ಕಳು.4 ಹೆಣ್ಣು, 1 ಗಂಡು.ದಾವ ಸ್ವತ್ತುಗಳು ಮಾಸ್ತಿಗೌಡರ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ಸದರಿ ಮಾಸ್ತಿಗೌಡರು ಹೀಗೆ 2 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ ಎಂದರೆ ಸರಿ.ಮಾಸ್ತಿಗೌಡ ಮತ್ತು ಅವರ ಮಕ್ಕಳುಗಳಲ್ಲಿ ಯಾವುದೇ ವಿಭಾಗವಾಗಿಲ್ಲ.ನಾನು ಅ.ದಾ.ಸಂಖ್ಯೆ 393/2013 ರಂದು ಸಲ್ಲಿಸಿದ್ದೇ ಎಂದರೆ ಸರಿ.ಸದರಿ ದಾವೆಯಲ್ಲಿ ಹೆಣ್ಣು ಮಕ್ಕಳನ್ನು ಪಾರ್ಟಿ ಮಾಡಿರಲ್ಲಿ ಎಂದರೆ ಸರಿ.ದಾವ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳು ಆದ ಕಾರಣ ಹೆಣ್ಣು ಮಕ್ಕಳಿಗೆ ಸಮಾನವಾದ ಭಾಗಾಂಶದ ಹಕ್ಕು ಇದೆ ಎಂದರೆ ನನಗೆ ಗೊತ್ತಿಲ್ಲ.

ಸರ್ವೆ ನಂಬರ್ 54/2 ನ್ನು ನನ್ನ ಗಂಡ ಮತು ನನ್ನ ಮಾವ ತಮ್ಮ ಕುಟುಂಬದ ದರ್ದಿಗೊಸ್ಕರ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಮೋಸ ಮಾಡುವ ಉದ್ದೇಶದಿಂದ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ.ವಾದಿ ಹಾಗೂ ಪ್ರತಿವಾದಿ 2 ರಿಂದ 4 ರವರು 1 ಮತ್ತು 5 ನೇ ಪ್ರತಿವಾದಿಗೆ ಹಕ್ಕು ಖುಲಾಸೆ ಬರೆದುಕೊಟ್ಟಿದ್ದಾರೆ ಎಂಬ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ.ವಾದಿಯ ಭಾಗಾಂಶದ ಹಕ್ಕಿಗೆ ದಕ್ಕೆ ತರುವ ಸಲುವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ-

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸ.ಇ.ಎ.ಒ.ಸ.ಮಾ,**

*(ಎಸ್.ಚಿನ್ನಸ್ವಾಮಿ)*
**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಚನ್ನರಾಯಪಟ್ಟಣ**

O.S 180/2013
DW-1